ಆ) ಈ ವರ್ಷದ ಮುಂಚಿನ ತಿಂಗಳುಗಳಲ್ಲಿ ಮಾಪಕಗಳ ಸರಬರಾಜಿನಲ್ಲಿ ಕೊರತೆಯಿದ್ದುದರಿಂದ ಮಾಪಕ ಅಳವಡಿಸುವುದು ಮತ್ತು ವಿದ್ಯುತ್ ಸಂಪರ್ಕ ಕೊಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ.

ಇ) 2,20,000 ಉತ್ತಮ ಗುಣಮಟ್ಟದ ಸಿಂಗಲ್ ಫೇಸ್ ಮಾಪಕಗಳನ್ನು ಸರಬರಾಜು ಮಾಡಲು ವಿದ್ಯುಚ್ಛಕ್ತಿ ಮಂಡಳಿಯ ಮಾಮೂಲು ಸರಬರಾಜುದಾರರಾದ ಬಿ.ಹೆಚ್.ಇ.ಎಲ್. ಕಂಪನಿಗೆ ಆದೇಶ ನೀಡಲಾಗಿದೆ. ಸರಬರಾಜು ಪ್ರಾರಂಭವಾಗಿದ್ದು, ಈಗ ಪರಿಸ್ಥಿತಿ ಸುಧಾರಿಸಿದೆ.

ವಿಷಯ :– ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕ ಕಮತನೂರ ಕೆರೆಯ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 467 (693)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ (ಸಂಕೇಶ್ವರ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕಮತನೂರ ಕೆರೆಯ ನಿರ್ಮಾಣದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಸದರಿ ಕೆರೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಸರ್ಕಾರದಿಂದ ಕೈಗೊಂಡಿರುವ ಕ್ರಮವೇನು?

ಇ) ಹಾಗಿದ್ದಲ್ಲಿ, ಇದಕ್ಕಾಗಿ ಸರ್ಕಾರದಿಂದ ಎಷ್ಟು ಪಣ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಈ ಕೆರೆಯ ಸರ್ವೆ ಕಾರ್ಯವನ್ನು ತೆಗೆದುಕೊಳ್ಳಲಾಗಿದ್ದು ಕೆರೆಯ ಮುಳುಗಡೆ ಜಮೀನಿನ ಮಾಲೀಕರಿಂದ ಸರ್ವೆ ಕೆಲಸಕ್ಕೆ ಅಡ್ಡಿ ಮಾಡುತ್ತಿರುವುದರಿಂದ ಈ ಕೆಲಸ ವಿಳಂಬವಾಗಿದೆ.

ಆ) ಈ ಕೆರೆಯ ಅಂಗಳ ಮತ್ತು ಒಡ್ಡಿನ ಪ್ರದೇಶಕ್ಕೆ ಬೇಕಾಗುವ ಜಮೀನಿನ ವಿವರಗಳನ್ನು ಕ್ರೋಢೀಕರಿಸಲಾಗಿದೆ. ಈ ಯೋಜನೆಯ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಈ ಕೆಲಸಕ್ಕೆ 1990–91 ರ ಆಯವ್ಯಯದಲ್ಲಿ 5 ಲಕ್ಷ ರೂ. ಗಳ ಅನುದಾನ ಒದಗಿಸಲಾಗಿದೆ.

ವಿಷಯ :– ರೈತರ 5 ಅಶ್ವಶಕ್ತಿಯವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಕೆ.ಇ.ಬಿ.ಯ ವಿದ್ಯುತ್ ಶುಲ್ಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 461 (961)

ಶ್ರೀ ಕೆ. ಸಿ. ಪೊಡಗೇಕರ್ ದೇಸಾಯಿ (ಬಾಗೇವಾಡಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿರುವಂತೆ ಕರ್ನಾಟಕ ಸರ್ಕಾರವೂ ಸಹ ರೈತರು 5 ಅಶ್ವಶಕ್ತಿಯವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಕೆ. ಇ. ಬಿ. ಯ ವಿದ್ಯುತ್ ಶುಲ್ಕದಿಂದ ವಿನಾಯಿತಿ ಯನ್ನು ನೀಡುವುದೇ ?

ಆ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ನೆರೆ ರಾಜ್ಯಗಳಲ್ಲಿ ಚಾಲ್ತಿ ಇರುವ ದರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆರ್ಥಿಕ ಪರಿಸ್ಥಿತಿ ಇವುಗಳನ್ನು ಗಮನಿಸಿ ಸರ್ಕಾರವು ಇತ್ತೀಚೆಗೆ ಸೆಪ್ಟೆಂಬರ್ 1990 ರಿಂದ ಜಾರಿಗೆ ಬರುವಂತೆ 5 ಅಶ್ವ ಶಕ್ತಿ ನೀರಾವರಿ ಪಂಪುಸೆಟ್ಟುಗಳಿಗೆ ಹೆಚ್. ಪಿ. ಒಂದಕ್ಕೆ ಹಿಂದೆ ಇದ್ದ ವಾರ್ಷಿಕ ದರ ರೂ. 90ನ್ನು ರೂ. 50 ಕ್ಕೆ ಇಳಿಸಿದೆ. ಅದರಂತೆ 5 ಹೆಚ್.ಪಿ. ಮೇಲ್ಪಟ್ಟು 10 ಹೆಚ್.ಪಿ. ಒಳಗೆ (10 ಹೆಚ್. ಪಿ. ಯೂ ಸೇರಿದಂತೆ) ಹೆಚ್. ಪಿ. ಒಂದಕ್ಕೆ ಹಿಂದೆ ಇದ್ದ ವಾರ್ಷಿಕ ದರ ರೂ. 130 ನ್ನು ರೂ. 60ಕ್ಕೆ ಇಳಿಸಿದೆ.

ಆ) 'ಅ' ಕ್ಕೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.